**ಡಿ.ಡಬ್ಲ್ಯೂ -1**

**<u>ಸಾಕ್ಷಿಯನ್ನು ದಿ 03.06.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್.ವಿ. ವಕೀಲರಿಂದಃ</u>**

ವಾದ ಪತ್ರದಲ್ಲಿ ವಿವರಿಸಿರುವ ವಾದಿ ಮತ್ತು ಪ್ರತಿವಾದಿಗಳ ಸಂಬಂಧ ಸರಿಯಾಗಿದೆ. ದಾವಾದ ಎಲ್ಲಾ ಆಸ್ತಿಗಳು ಒಂದನೆಯ ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂದರೆ ಸರಿ. ಒಂದನೆಯ ಪ್ರತಿವಾದಿ 2025 ರ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ಒಂದನೆಯ ಪ್ರತಿವಾದಿಯು ಈ ದಾವೆಯಲ್ಲಿ ಒಂದನೆಯ ಪ್ರತಿವಾದಿ 12.07.2016 ರಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುವುದಿಲ್ಲ. ಒಂದನೆಯ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾದ ಕೆಲವು ಆಸ್ತಿಗಳು ಪಿತ್ರಾರ್ಜಿತ ಮತ್ತು ಕೆಲವು ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳೆಂದು ಎಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವಿಭಾಗ ಆಗಿರುವುದಿಲ್ಲ.

ದಾವಾದ ಎರಡನೆಯ ಆಸ್ತಿಗೆ ಸಂಬಂಧಿಸಿದಂತೆ ಒಂದನೆಯ ಪ್ರತಿವಾದಿಯ ಹೆಸರಿನಲ್ಲಿ ಕ್ರಯ ಪತ್ರ ಆಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ನಾನೇ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಖರೀದಿ ಮಾಡಲು ನಾನೇ ಹಣ ನೀಡಿದ್ದೇನೆಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ದಾವಾದಾ ಎರಡನೆಯ ಆಸ್ತಿಗೆ ಸಂಬಂಧಿಸಿದ ಕ್ರಯ ಪತ್ರದಲ್ಲಿ ನಾನು ಹಣ ಸಂದಾಯ ಮಾಡಿರುತ್ತೇನೆಂದು ನಮೂದು ಇದೆಯಾ ಎಂದರೆ ಸಾಕ್ಷಿ ನೋಡಿ ಹೇಳಬೇಕೆಂದು ನುಡಿಯುತ್ತಾರೆ. ಸದರಿ ಪತ್ರವನ್ನು ನಾನು ಹಾಜರು ಮಾಡಿಲ್ಲ. ನನ್ನ ತಂದೆ 1979 ರಲ್ಲಿ ಮರಣ ಹೊಂದಿರುತ್ತಾರೆ. ಆಗ ನನಗೆ 16 ವರ್ಷ ವಯಸ್ಸಾಗಿತ್ತು. ನನ್ನ ತಂದೆ ಮರಣ ಹೊಂದಿದ ನಂತರ ನಮ್ಮ ತಾಯಿಯೇ ಮನೆಯ ಯಜಮಾನಿಕೆ ಮಾಡಿ ನಮ್ಮನ್ನು ಪಾಲನೆ ಪೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮರಣ ಹೊಂದುವ ಕಾಲಕ್ಕೆ ನಾನು ಅಪ್ರಾಪ್ತನಾಗಿದ್ದು, ನನಗೆ ಯಾವುದೇ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ದಾವಾದ 1, 3 ರಿಂದ 7

ಆಸ್ತಿಗಳು ಪವತಿ ಮೂಲಕ ನಮ್ಮ ತಾಯಿಗೆ ಖಾತೆ ಆಗಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳಿಂದ ಬಂದಂತಹ ಆದಾಯದಿಂದ ನಮ್ಮ ಪಾಲನೆ ಪೋಷಣೆ ಮತ್ತು ಮನೆಯ ನಿರ್ವಹಣೆಗೆ ಬಳಸುತ್ತಿದ್ದರು ಮತ್ತು ನಮ್ಮಗಳ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳಿಂದ ಬಂದಂತಹ ಆದಾಯದಿಂದ ಮತ್ತು ವಾದಿಯು ಮಾಡಿರುವ ಧನ ಸಹಾಯದಿಂದ ಒಂದನೆಯ ಪ್ರತಿವಾದಿ ದಾವಾದ ಎರಡನೆಯ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಒಂದನೆಯ ಪ್ರತಿವಾದಿಯ ವಯಸ್ಸನ್ನು ದುರುಪಯೋಗ ಮಾಡಿಕೊಂಡು ನಾನು ನನ್ನ ಮಗ 6 ನೇ ಪ್ರತಿವಾದಿಯ ಹೆಸರಿಗೆ ಸುಳ್ಳು ದಾನಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒಂದನೆಯ ಪ್ರತಿವಾದಿಯು ತನ್ನ ತಕರಾರಿನಲ್ಲಿ ದಾನಪತ್ರವನ್ನು ಶಿವಕುಮಾರ್ ನನ್ನ ಗಮನಕ್ಕೆ ಬಾರದಂತೆ ದಾನಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆಂದು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾದ ಎರಡನೆಯ ಆಸ್ತಿಯಲ್ಲಿ ವಾದಿಗೆ, ನನಗೆ, 3-5 ನೇ ಪ್ರತಿವಾದಿಗಳಿಗೆ ಸಮಾನ ಭಾಗಾಂಶ ಇದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ವಾಡಿರುವುದರಿಂದ ಒಂದನೆಯ ಪ್ರತಿವಾದಿಗೆ ದಾವಾದ ಎರಡನೆಯ ಆಸ್ತಿಯನ್ನು ದಾನ ಮಾಡುವ ಸಂಪೂರ್ಣ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. 2014 ರ ಸಾಲಿನಲ್ಲಿ ವಾದಿಯು ದಾವಾ ಆಸ್ತಿಗಳಲ್ಲಿ ಭಾಗಾಂಶ ಕೇಳಿದಾಗ ದಾವಾದ ಎರಡನೆಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾನಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರ ಸರಿಯಲ್ಲ. ದಾವಾದ 7 ನೇ ಆಸ್ತಿಯಲ್ಲಿ ಸುಮಾರು 5 ಲಕ್ಷ ಖರ್ಚು ಮಾಡಿ ನಾನು ಮನೆ ಕಟ್ಟಿರುತ್ತೇನೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮನೆ ನಿರ್ಮಿಸುವಷ್ಟು ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಭಾಗವನ್ನು ಕೊಡುವುದನ್ನು ತಪ್ಪಿ ಸುವ ಉದ್ದೇಶದಿಂದ ಸುಳ್ಳು ತಕರಾರರನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಸೃಷ್ಠಿತ ದಾನಪತ್ರದ ಆಧಾರದ ಮೇಲೆ 6ನೇ ಪ್ರತಿವಾದಿಗೆ ದಾವಾದ ಎರಡನೆಯ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾನಪತ್ರ ವಾದಿಯ ಭಾಗಾಂಶಕ್ಕೆ ಭಾದಿಸುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.